# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1415 |
| **ಸದಸ್ಯರ ಹೆಸರು** | : | ಶ್ರೀ ಹೆಚ್.ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) |
| **ಉತ್ತರಿಸಬೇಕಾದ ದಿನಾಂಕ** | : | 18-12-2025 |
| **ಉತ್ತರಿಸಬೇಕಾದ ಸಚಿವರು** | : | ಉಪ ಮುಖ್ಯಮಂತ್ರಿಯವರು |

****

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರಿನ ಕುಡಿಯುವ ನೀರಿಗಾಗಿ 1 ರಿಂದ 5ನೇ ಹಂತದವರೆಗೂ ದಿನನಿತ್ಯ ಸರಬರಾಜು ಆಗುವ ನೀರಿನ ಪ್ರಮಾಣ ಎಷ್ಟು; (ಎಂ.ಆರ್.ಡಿ ಲೆಕ್ಕದಲ್ಲಿ ವಿವರ ನೀಡುವುದು)</td><td>
<table>
<tr><th>ಕ್ರ.<br>ಸಂ</th><th>ಕಾವೇರಿ ನೀರು ಸರಬರಾಜು ಯೋಜನೆಯ ಹಂತಗಳು</th><th>ಬೆಂಗಳೂರಿಗೆ ದಿನ ನಿತ್ಯ ಸರಬರಾಜು ಆಗುವ ನೀರಿನ ಪ್ರಮಾಣ</th></tr>
<tr><td>1</td><td>ಕಾವೇರಿ 1ನೇ ಹಂತ</td><td>135 ಎಂ.ಎಲ್.ಡಿ</td></tr>
<tr><td>2</td><td>ಕಾವೇರಿ 2ನೇ ಹಂತ</td><td>135 ಎಂ.ಎಲ್.ಡಿ</td></tr>
<tr><td>3</td><td>ಕಾವೇರಿ 3ನೇ ಹಂತ</td><td>330 ಎಂ.ಎಲ್.ಡಿ</td></tr>
<tr><td>4</td><td>ಕಾವೇರಿ-4ನೇ ಹಂತ 1ನೇ ಘಟ್ಟ</td><td>300 ಎಂ.ಎಲ್.ಡಿ</td></tr>
<tr><td>5</td><td>ಕಾವೇರಿ 4ನೇ ಹಂತ 2ನೇ ಘಟ್ಟ</td><td>550 ಎಂ.ಎಲ್.ಡಿ</td></tr>
<tr><td>6</td><td>ಕಾವೇರಿ 5ನೇ ಹಂತ</td><td>421 ಎಂ.ಎಲ್.ಡಿ</td></tr>
<tr><td></td><td>ಒಟ್ಟು</td><td>1871 ಎಂ.ಎಲ್.ಡಿ</td></tr>
</table>
</td></tr>
<tr><td>ಆ)</td><td>ಕಾವೇರಿ ಐ-ತೀರ್ಪಿನ ನಂತರ ಬೆಂಗಳೂರಿಗೆ ಕುಡಿಯುವ ನೀರಿಗಾಗಿ ನಿಗದಿಯಾಗಿರುವ ನೀರಿನ ಪ್ರಮಾಣ ಎಷ್ಟು; (ಟಿ.ಎಂ.ಸಿ ಲೆಕ್ಕದಲ್ಲಿ ವಿವರ ನೀಡುವುದು)</td><td>ಕಾವೇರಿ ಐ-ತೀರ್ಪಿನ ನಂತರ ಬೆಂಗಳೂರಿಗೆ ಕುಡಿಯುವ ನೀರಿಗಾಗಿ ಒಟ್ಟು 26.20 ಟಿ.ಎಂ.ಸಿ. ನೀರನ್ನು ನಿಗದಿ ಮಾಡಲಾಗಿರುತ್ತದೆ.</td></tr>
<tr><td>ಇ)</td><td>ಬೆಂಗಳೂರಿಗೆ ಕುಡಿಯುವ ನೀರಿಗಾಗಿ 6ನೇ ಹಂತದ ಯೋಜನೆಗಾಗಿ ಸಾಧ್ಯತೆ ವರದಿ (Feasibility Report) ಹಾಗೂ (Detailed Project Report) ಡಿ.ಪಿ.ಆರ್ ರೂಪಿಸಲಾಗಿದೆಯೇ; ಇದಕ್ಕೆ ಸರ್ಕಾರದ ಅನುಮತಿ ದೊರಕಿರುವುದೇ; (ವಿವರ ನೀಡುವುದು)</td><td rowspan="2">ಕಾವೇರಿ 6ನೇ ಹಂತದ ಯೋಜನೆಯ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>ಈ)</td><td>6ನೇ ಹಂತದ ಯೋಜನೆಯನ್ನು ಮಳವಳ್ಳಿಯ ತೊರೆಕಾಡನಹಳ್ಳಿ ಮುಖಾಂತರ ತರಲು ಸಾಧ್ಯವೇ ಅಥವಾ ಮತ್ತೊಂದು ಪರ್ಯಾಯ ಮಾರ್ಗದಲ್ಲಿ ತರಲು ಯೋಜಿಸಲಾಗಿದೆಯೇ; ಇದಕ್ಕೆ ಸರ್ಕಾರದ ಅನುಮತಿ ದೊರಕಿರುವುದೇ; (ವಿವರ ನೀಡುವುದು)</td></tr>
</table>

| | | |
|---|---|---|
| **ಉ)** | 6ನೇ ಹಂತದ ಯೋಜನೆ ಅಡಿಯಲ್ಲಿ ಯಾವ ಯಾವ ಬಡಾವಣೆಗಳಿಗೆ ನೀರನ್ನು ಹಾಯಿಸಲು ಯೋಜಿಸಲಾಗಿದೆ? (ವಿವರ ನೀಡುವುದು) | ಕಾವೇರಿ 6ನೇ ಹಂತದ ಯೋಜನೆ ಅಡಿಯಲ್ಲಿ ಹಂಚಿಕೆಯಾಗಿರುವ 6 ಟಿಎಂಸಿ ನೀರಿನ ಪೈಕಿ, 4 ಟಿಎಂಸಿ ನೀರನ್ನು ಬೆಂಗಳೂರು ನಗರಕ್ಕೆ ಹಾಗೂ ಉಳಿದ 2 ಟಿಎಂಸಿ ನೀರನ್ನು ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಬೇಡಿಕೆಯ ಅನುಸಾರ ಬೆಂಗಳೂರು ಉಪನಗರಗಳಾದ ಮಾದನಾಯಕನಹಳ್ಳಿ, ಹುಣಸೇಮಾರನಹಳ್ಳಿ, ಚಿಕ್ಕಬಾಣವಾರ, ನೆಲಮಂಗಲ, ಹೊಸಕೋಟೆ, ದೇವನಹಳ್ಳಿ, ಬಾಶೆಟ್ಟಿಹಳ್ಳಿ, ವಿಜಯಪುರಗಳಿಗೆ ಬಲ್ಕ್ ವಾಟರ್ ಸಪ್ಲೈ ಮೂಲಕ ನೀರು ಸರಬರಾಜು ಮಾಡಲು ಯೋಜಿಸಲಾಗಿರುತ್ತದೆ. |

**ಸಂಖ್ಯೆ:** ನಅಇ 415 ಎಂಎನ್‌ಐ 2025(ಇ)

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**